ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**
GSTIN : 29AALB0060D1ZS

ಸಂಖ್ಯೆ :
No.

ದಿನಾಂಕ :
Date : 20/12/2023

ಬೆಂಅಪ್ರಾ/ನಯೋಸ/PRL-14/2022-23/ 2015 /2023-24.
Computer No. 182963

# ಕಾರ್ಯಾದೇಶ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2-A) ರಡಿಯಲ್ಲಿ]

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-16.39ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ M/s. IInspira World City Project Pvt Ltd. & IInsppra World City LLP ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ 06.08.2023.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 3.3.12 / 2023, ದಿನಾಂಕ 20.03.2023.
3. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-14/2022-23/135/2023-24, ದಿನಾಂಕ 17.04.2023.
4. ಕೆನರಾ ಬ್ಯಾಂಕ್ ಚಲನ್ ನಂ. GN2305845, ದಿನಾಂಕ 11.05.2023.
5. ಈ ಕಛೇರಿ ಅ.ಟಿ. ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-14/2022-23/1824 /2023-24, ದಿನಾಂಕ 29.11.2023.
6. ಅಧಿಕ ಜಿಲ್ಲಾ ನೊಂದಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪರಿತ್ಯಾಜನಾ ಪತ್ರ BDA-1-02672-2023-24, ದಿನಾಂಕ 02.12.2023.

ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-23ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ಉಲ್ಲೇಖ [1] ರಂತೆ ಅರ್ಜಿದಾರರು ಕೋರಿರುತ್ತಾರೆ.

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-16.39ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ M/s. Inspira World City Project Pvt Ltd. & Others ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

ದಿನಾಂಕ 20.03.2023 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 3.3.12/ 2023 ರ ನಡವಳಿಯಲ್ಲಿ ಚರ್ಚೆಯ ಪ್ರಸ್ತಾವನೆಯಲ್ಲಿ ಜಮೀನುಗಳಿಗೆ ಮೂಲತ: 10.60ಮೀ ರಿಂದ 11.0ಮೀ (Varying Width) ಅಗಲವನ್ನು ಪರಿಗಣಿಸಿ ವಿನ್ಯಾಸಕ್ಕೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಿನ್ಯಾಸದಲ್ಲಿನ 12.0ಮೀ ಗಿಂತ ಹೆಚ್ಚಿನ ಅಗಲದ ರಸ್ತೆಯಿಂದ ಪ್ರಸ್ತಾವನೆಯಲ್ಲಿನ ವಿನ್ಯಾಸಕ್ಕೆ ಸಂಪರ್ಕ ಇರುತ್ತದೆ. 12.0ಮೀ ಅಗಲದ ರಸ್ತೆಯು ಅನುಮೋದಿತ ವಿನ್ಯಾಸದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುವುದರಿಂದ ಮೂಲ ಉಪಗಮನ ರಸ್ತೆ ಅಗಲ 10.60ಮೀ ರಿಂದ 11.0ಮೀ ಪರಿಗಣಿಸಬೇಕಾಗಿರುತ್ತದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಅರ್ಜಿದಾರರು ಮನವಿಯಲ್ಲಿ ತಿಳಿಸಿರುವಂತೆ ಪ್ರಸ್ತಾವನೆಯಲ್ಲಿನ ಜಮೀನುಗಳಲ್ಲಿ ಇರುವ ಕಾಲುದಾರಿ ಪಂಕ್ತೀಕರಣ, ಪಥ ಬದಲಾವಣೆಗಾಗಿ ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿರುವುದರಿಂದ ಪಥ ಬದಲಾವಣೆ ಆದೇಶವನ್ನು ಪಡೆದು ಸಲ್ಲಿಸಿದ ನಂತರ ಹಾಗೂ ಸರ್ವೆ ನಂ.16 ರ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣವು ಮುಕ್ತಾಯಗೊಂಡ ನಂತರ ಸೂಕ್ತವಾಗಿ ವಿನ್ಯಾಸ ನಕ್ಷೆಯನ್ನು ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿಗೆ ಅನುಗುಣವಾಗಿ ತಿದ್ದುಪಡಿ ಮಾಡಿರುವ ನಕ್ಷೆಯನ್ನು ಸಲ್ಲಿಸಿದ ನಂತರ ಕಾರ್ಯಾದೇಶ & ವಿನ್ಯಾಸ ನಕ್ಷೆಯನ್ನು ನೀಡುವ ಮತ್ತು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ. 120/1, 120/3, 120/4 ರಲ್ಲಿನ ಒಟ್ಟು 39ಎ-23ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರಡಿಯಲ್ಲಿ Demarcation & Development ಉದ್ದೇಶಕ್ಕೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು ಸಾಮಾನ್ಯ ಷರತ್ತುಗಳಿಗೊಳಪಟ್ಟು ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು.

ಪ್ರಾಧಿಕಾರದ ಸಮಿತಿ ಸಭೆಯ ತೀರ್ಮಾನದಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ [3] ರ ಈ ಕಛೇರಿ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ಒಟ್ಟು ₹.02,73,11,140/- [`₹. ಎರಡು ಕೋಟಿ ಎಪ್ಪತ್ತಮೂರು ಲಕ್ಷದ ಹನ್ನೊಂದು ಸಾವಿರದ ನೂರ ನಲವತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸುವಂತೆ ತಿಳಿಸಲಾಗಿತ್ತು. ಅರ್ಜಿದಾರರು ಉಲ್ಲೇಖ [4] ರಲ್ಲಿ ಪ್ರಾಧಿಕಾರದ ಕೆನರಾ ಬ್ಯಾಂಕ ಚಲನ್ ನಂ. GN2305845 ರ ಮೂಲಕ ದಿನಾಂಕ 23.10.2023 ರಂದು ₹.02,73,11,140/- [`₹. ಎರಡು ಕೋಟಿ ಎಪ್ಪತ್ತಮೂರು ಲಕ್ಷದ ಹನ್ನೊಂದು ಸಾವಿರದ ನೂರ ನಲವತ್ತು ಮಾತ್ರ] ಪಾವತಿಸಿ ಚಲನ್ ಪ್ರತಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಪಾವತಿಸಿರುವ ಮೊತ್ತವು ಪ್ರಾಧಿಕಾರದ ಖಾತೆಗೆ ಸಂದಾಯವಾಗಿರುವ ಬಗ್ಗೆ ಆರ್ಥಿಕ ಸದಸ್ಯರು ದಿನಾಂಕ 15.05.2023 ರಂದು ಕಡತದಲ್ಲಿ ದೃಢೀಕರಿಸಿರುತ್ತಾರೆ.

ಪ್ರಸ್ತಾವಿತ ಜಮೀನುಗಳಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಆದೇಶ ಸಂಖ್ಯೆ ಎಲ್ ಇನ್ ಡಿ[ಎ]ಸಿಆರ್/327/22-23, ದಿನಾಂಕ 18.05.2023 ರಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳ 1969 ರ ನಿಯಮ

Housiey.com

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-16.39ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ M/s. Inspira World City Project Pvt Ltd. & Others ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

28ಎ[1][i][ii]ರಡಿ ಕಾಲುದಾರಿ ಮತ್ತು ಬಂಡಿದಾರಿ ಪಥ ಬದಲಾವಣೆ ಮಾಡಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರಡಿಯಲ್ಲಿ ಕೆಲವು ಷರತ್ತುಗಳಿಗೆ ಒಳಪಟ್ಟು ಆದೇಶ ಹೊರಡಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಆದೇಶದಂತೆ ಪಥ ಬದಲಾವಣೆಯ ಹೊಸ ಪಂಕ್ತೀಕರಣವನ್ನು ವಿನ್ಯಾಸ ನಕ್ಷೆಯಲ್ಲಿ ಅಳವಡಿಸಿ ಒಟ್ಟು 39 ಎ 16.39 ಗುಂ ಪ್ರದೇಶಕ್ಕೆ ಅರ್ಜಿದಾರರು ನಕ್ಷೆಯನ್ನು ಸಲ್ಲಿಸಿರುತ್ತಾರೆ. ಹಾಗೂ ಪ್ರಸ್ತಾವನೆಯಲ್ಲಿನ ಚೂಡಸಂದ್ರ ಗ್ರಾಮದ ಸರ್ವೆ ನಂ. 16 ಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ OS No. 1075/2022 ರ ದಿನಾಂಕ 18.11.2023 ರ ನ್ಯಾಯಾಲಯದಿಂದ ಅಂತಿಮ ತೀರ್ಪಿನ ಪ್ರತಿಯನ್ನು ಸಲ್ಲಿಸಿದ್ದು, ಪ್ರಕರಣವು ಮುಕ್ತಾಯಗೊಂಡಿರುವುದು ಕಂಡು ಬಂದಿರುತ್ತದೆ.

ತಾತ್ಕಾಲಿಕ ಕರಡು ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ, ರಸ್ತೆ ವಿಸ್ತರಣೆ ಮತ್ತು ಸಾರ್ವಜನಿಕ ಸೌಕರ್ಯಗಳಿಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸುವಂತೆ ಅರ್ಜಿದಾರರಿಗೆ ಮತ್ತು ಸದರಿ ಪ್ರದೇಶಗಳನ್ನು ಹಸ್ತಾಂತರಿಸಿಕೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು [ಪೂರ್ವ ವಿಭಾಗ], ಇವರಿಗೆ ಉಲ್ಲೇಖ [5] ರ ಈ ಕಛೇರಿಯ ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ತಾತ್ಕಾಲಿಕ ಕರಡು ವಸತಿ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ, ರಸ್ತೆ ವಿಸ್ತರಣೆ ಮತ್ತು ಸಾರ್ವಜನಿಕ ಸೌಕರ್ಯಗಳಿಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಉಲ್ಲೇಖ [6] ರಂತೆ ಹಸ್ತಾಂತರಿಸಿಕೊಂಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-16.39ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯನ್ನು Demarcation & Development ಉದ್ದೇಶಕ್ಕಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

| | |
|---|---|
| 1. | ರೇರಾ ಅಧಿನಿಯಮ 2016 ಹಾಗೂ ಸಂಬಂಧಿತ ಅಧಿನಿಯಮಗಳು 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೊಂದಣಿ ಮಾಡಿಸುವುದು. |
| 2. | ಪ್ರಶ್ನಿತ ಜಮೀನುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಾಗಲೀ / ಲೋಕಾಯುಕ್ತದಲ್ಲಾಗಲೀ ಯಾವುದೇ ವಿಚಾರಣಾ ಪ್ರಾಧಿಕಾರದಲ್ಲಾಗಲೀ ಪ್ರಕರಣ ದಾಖಲಾಗಿದ್ದಲ್ಲಿ ಅರ್ಜಿದಾರರೇ ಬಗೆಹರಿಸಿಕೊಳ್ಳತಕ್ಕದ್ದು. |
| 3. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ನಿವೇಶನಗಳ ಅಳತೆ ಹಾಗೂ ನಿವೇಶನಗಳ ಒಟ್ಟು ಸಂಖ್ಯೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿ ಬದಲಾಯಿಸತಕ್ಕದ್ದಲ್ಲ. |

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೊಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-16.39ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ M/s. Inspira World City Project Pvt Ltd. & Others ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 4. | ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು, ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ. |
| 5. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು, ವಿಲೇವಾರಿಗಾಗಿ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 6. | ಉದ್ಯಾನವನ ಮತ್ತು ಬಯಲುಜಾಗಗಳ ಸಂಖ್ಯೆಗಳನ್ನು ಅಳವಡಿಸಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನಕ್ಷೆ ಪ್ರಕಾರ ಶೇ.100 ರಷ್ಟು ನಿವೇಶನಗಳ ಬಿಡುಗಡೆ ಕೋರುವ ಮೊದಲು Chain link Fencing ಮಾಡಿ ಹಾಗೂ ಅಭಿವೃದ್ಧಿಪಡಿಸುವುದು. |
| 7. | ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಲ್ಲಿ ತೋರಿಸಿರುವ ರಸ್ತೆ ಅಗಲವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. |
| 8. | ಬಫರ್ ಪ್ರದೇಶದಲ್ಲಿ ಗಿಡ-ಮರಗಳನ್ನು ಬೆಳಸತಕ್ಕದ್ದು |
| 9. | ಅರ್ಜಿದಾರರು ಉದ್ದೇಶಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 10. | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸುಳ್ಳು ದಾಖಲೆ ಅಥವಾ ಇನ್ನಿತರೆ ಪೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ತಾತ್ಕಾಲಿಕ ಅನುಮೋದನೆ ನೀಡಿರುವ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನಕ್ಷೆ ಅನುಮೋದನೆಯು ತನ್ನಿಂದತಾನೆ ರದ್ದಾಗುವುದೆಂದು ಭಾವಿಸತಕ್ಕದ್ದು. |
| 11. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು. |
| 12. | ತಾತ್ಕಾಲಿಕ ವಿನ್ಯಾಸದಲ್ಲಿನ ವಸತಿ ಅಭಿವೃದ್ಧಿಗಳಿಂದ ಉತ್ಪಾದನೆಯಾಗುವ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿಗಳಾಗಿ ವಿಂಗಡಿಸಲು ಹಾಗೂ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 13. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿ ಎಲ್ಲಾ ರಸ್ತೆಗಳನ್ನು IRC Specification ಪ್ರಕಾರ ಅಭಿವೃದ್ಧಿ ಪಡಿಸತಕ್ಕದ್ದು, ಅದಕ್ಕೂ ಮುಂಚೆ ಅಂದಾಜುಪಟ್ಟಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದಿಂದ ಅನುಮೋದಿಸಿಕೊಳ್ಳತಕ್ಕದ್ದು, ರಸ್ತೆ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಅಭಿಯಂತರ ವಿಭಾಗದಿಂದ ಸ್ಥಳ ಪರಿಶೀಲನೆಗಾಗಿ ಮತ್ತು ಕಾಮಗಾರಿ ಪರಿಶೀಲನೆಗೆ ಅನುವು ಮಾಡಿಕೊಡತಕ್ಕದ್ದು. |

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-16.39ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ M/s. Inspira World City Project Pvt Ltd. & Others ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 14. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಪ್ರತಿ ನಿವೇಶನಕ್ಕೂ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸಕ್ಕದ್ದು. |
| 15. | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17-2ಬಿ ರನ್ವಯ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ ನಂತರ, ಸಕ್ಷಮ ಪ್ರಾಧಿಕಾರಗಳಿಂದ ಸಿವಿಲ್, ವಿದ್ಯುತ್, ಒಳಚರಂಡಿ ಮತ್ತು ನೀರು ಸರಬರಾಜು ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಕುರಿತು ಪ್ರಮಾಣ ಪತ್ರಗಳೊಂದಿಗೆ ಕೋರಿಕೆ ಸಲ್ಲಿಸಿದಲ್ಲಿ ಅಂತಿಮ ವಸತಿ ವಿನ್ಯಾಸವನ್ನು ಮತ್ತು ವಸತಿ ನಿವೇಶನಗಳನ್ನು ಬಿಡುಗಡೆಗೊಳಿಸಲಾಗುವುದು. |
| 16. | ವಸತಿ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯತಕ್ಕದ್ದು. |
| 17. | ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಅರ್ಜಿದಾರರೇ ಕಾರ್ಯಗತ ಮಾಡತಕ್ಕದ್ದು. |
| 18. | ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದು. |
| 19. | ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಪ್ರತಿ ನಿವೇಶನಕ್ಕೆ ಗೃಹ ಬಳಕೆ, ಕುಡಿಯುವ ನೀರಿನ ಹಾಗೂ ಇತರೆ ಉಪಯೋಗದ ನೀರು ಸರಬರಾಜು ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಗಳನ್ನು ಅಳವಡಿಸತಕ್ಕದ್ದು. |
| 20. | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಅದೇ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 21. | BESCOM ನಿರ್ದೇಶನದಂತೆ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ವಿದ್ಯುತ್ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. |
| 22. | ಸದರಿ ವಸತಿ ವಿನ್ಯಾಸದಲ್ಲಿ ಪ್ರಾಧಿಕಾರದ ದಿನಾಂಕ.08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ನಿವೇಶನಗಳ ಶೇ.10 ರಷ್ಟು ವಸತಿ ನಿವೇಶನಗಳನ್ನು ಆರ್ಥಿಕ ಹಿಂದುಳಿದ ವರ್ಗದವರಿಗಾಗಿ (EWS) ಮತ್ತು ಕಡಿಮೆ ಆದಾಯ ವರ್ಗದವರಿಗಾಗಿ (LIG) ಕಾಯ್ದಿರಿಸಕ್ಕದ್ದು, ಆ ವರ್ಗದವರಿಗೆ ನಿವೇಶನವನ್ನು ಹಂಚಿಕೆ ಮಾಡತಕ್ಕದ್ದು. ಆರ್ಥಿಕ ದುರ್ಬಲ ವರ್ಗದವರಿಗಾಗಿ (EWS) ಕಾಯ್ದಿರಿಸಿದ ನಿವೇಶನಗಳನ್ನು ಒಂದುಗೂಡಿಸಿ ದೊಡ್ಡ ಅಳತೆಯ ನಿವೇಶನವನ್ನಾಗಿ ಸಮಾಮೇಲನಾ ಮಾಡಿದ್ದಲ್ಲಿ ಮೂಲ ಆಶಯ ವಿಫಲವಾಗುವುದರಿಂದ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ (EWS) ಕಾಯ್ದಿರಿಸಿದ ವಸತಿ ನಿವೇಶನಗಳನ್ನು ಸಮಾಮೇಲನಾ ಮಾಡತಕ್ಕದ್ದಲ್ಲ. |
| 23. | BWSSB / KUWSDB/RWS, BESCOM ಇಲಾಖೆಗಳಿಂದ ಹಾಗೂ ಅಗತ್ಯಕ್ಕನುಗುಣವಾಗಿ KSPCB ರವರಿಂದ ಹಾಗೂ ಇತರೆ ಸಂಬಂಧಿತ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರಗಳನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸುವುದು. |

Housiey.com

ವಿಷಯ:- ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚೂಡಸಂದ್ರ ಗ್ರಾಮದ ಸರ್ವೆ ನಂ. 2/1, 2/2, 4, 5, 7, 8/1, 8/2, 8/3, 9, 10, 13/2, 13/3, 14/1, 14/2, 14/3, 15/1, 15/2, 15/3, 16, 17/1, 86/1, 86/3, 86/4 ಮತ್ತು ರಾಯಸಂದ್ರ ಗ್ರಾಮದ ಸರ್ವೆ ನಂ.120/1, 120/3, 120/4 ರಲ್ಲಿನ ಒಟ್ಟು 39ಎ-16.39ಗುಂ ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-A) ರ ಅಡಿಯಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ M/s. Inspira World City Project Pvt Ltd. & Others ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ.

---

| | |
|---|---|
| 24. | ಬಡಾವಣೆ ನಕ್ಷೆಯಲ್ಲಿ Transformer Yard, RWH, STP, OHT, SWM ಗಳಿಗಾಗಿ ಸೂಕ್ತ ಜಾಗಗಳನ್ನು ಕಾಯ್ದಿರಿಸಿದ್ದು ಇವುಗಳನ್ನು ಬದಲಾಯಿಸುವಂತಿಲ್ಲ ಹಾಗೂ ಸಂಬಂಧಪಟ್ಟ ಸಂಸ್ಥೆಯ ಅಭಿಪ್ರಾಯದಂತೆ ಅಭಿವೃದ್ಧಿಪಡಿಸುವುದು. |
| 25. | ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಇತರೆ ಪರತ್ತುಗಳಿಗೆ ಬದ್ಧರಾಗಿರುವುದು. |

ಆಯುಕ್ತರು,
ಬೆಂಅಪ್ರಾ, ಬೆಂಗಳೂರು

ಇವರಿಗೆ,

M/S IInspira World City Project Pvt. Ltd.,
IInspira World City LLP [Owner & GPA Holder],
# 225, 36th Cross Road,
5th Main Road, 4th Block, Jayanagar,
Bangalore 560 011.

Housiey.com